ಶ್ರೀ ಕೆ. ಜೆ. ಜಾರ್ಜ್. (ಸಾರಿಗೆ ರಾಜ್ಯ ಸಚಿವರು).—

ಅ) ಅಂತರ ರಾಜ್ಯ ಸಾರಿಗೆ ಒಪ್ಪಂದಗಳನ್ವಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೯೦ಳ ಬಸ್ಸುಗಳನ್ನು ನೆರೆ ರಾಜ್ಯಗಳಿಗೂ ಅದೇ ರೀತಿ ನೆರೆ ರಾಜ್ಯಗಳು ಕರ್ನಾಟಕಕ್ಕೆ ೧೧೯೭ ಬಸ್ಸುಗಳನ್ನು ಓಡಿಸುತ್ತಿದೆ.

		ಕರ್ನಾಟಕ ಬೇರೆ ರಾಜ್ಯದಲ್ಲಿ		ಬೇರೆ ರಾಜ್ಯಗಳು ಕರ್ನಾಟಕದಲ್ಲಿ	
		ಮಾರ್ಗಗಳ ಸಂಖ್ಯೆ	ಬಸ್ಸುಗಳು	ಮಾರ್ಗಗಳ ಸಂಖ್ಯೆ	ಬಸು ಗಳು
೧.	ಮಹಾರಾಷ್ಟ್ರ	೨೫೩	೫೦೪	೩೨೪	೬೮೯
೨.	ಆಂಧ್ರಪ್ರದೇಶ	೧೩೨	೨೪೪	೧೫೨	೨೯೦
೩.	ಗೋವಾ	೨೩	೩೦	೨೦	೫೨
೪.	ಕೇರಳ	೧೮	೩೫	೧೪	೩೨
೫.	ತಮಿಳುನಾಡು	೪೮	೯೧	೫೯	೧೩೪
		೪೭೪	೯೦೪	೫೬೯	೧೧೯೭

ಆ) ಹೌದು

ಹುಬ್ಬಳ್ಳಿಯಲ್ಲಿ ಹೊಸ ಬಸ್ ನಿಲ್ದಾಣ ಸ್ಥಾಪನೆ

೧೧೦೦. ಶ್ರೀ ಗೋಪಿನಾಥ್ ಆರ್. ಸಾಂದ್ರ, (ಹುಬ್ಬಳ್ಳಿ-ಗ್ರಾಮೀಣ)—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹುಬ್ಬಳ್ಳಿಯಲ್ಲಿ ಪ್ರಾದೇಶಿಕ ಕಾರ್ಯಾಗಾರದ ಹತ್ತಿರ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಆಯವ್ಯಯದಲ್ಲಿ ೫೦ ಲಕ್ಷ ರೂಗಳನ್ನು ಒದಗಿಸಿರುವುದು ನಿಜವೇ?

ಆ) ಇಲ್ಲವಾದಲ್ಲಿ ಸರ್ಕಾರವು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಇಲ್ಲ.

ಆ) ೧೯೯೦-೯೧ರ ಆಯವ್ಯಯದಲ್ಲಿ ೧೦ ಲಕ್ಷ ರೂಗಳನ್ನು ಅಳವಡಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗ ಸಂಸ್ಥೆಯಲ್ಲಿ ಹರಾಜಿನಿಂದ ಬಂದ ಮೊಬಲಗಿನ ಬಗ್ಗೆ

೧೧೯೩. ಶ್ರೀ ಎಸ್. ಷಫಿ ಅಹಮದ್, (ತುಮಕೂರು).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ.ರಾ.ರ.ಸಾ. ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ಒಟ್ಟು ಸರಕುಗಳು (ಪ್ರತಿಯೊಂದು ಸರಕಿನ ದರ ವಿವರಿಸಬೇಕು)

ಆ) ಮೇಲೆ ಹೇಳಿದ ಸರಕುಗಳ ಸರಬರಾಜುದಾರರು ?

ಇ) ಈ ಸರಬರಾಜುದಾರರು ಅಂಗೀಕರಿಸಿದ ಉದ್ದಿಮೆಗಳೆ?

ಈ) ನಿರುಪಯುಕ್ತ ಬಸ್ಸುಗಳನ್ನು ಹರಾಜು ಮಾಡಿ ಕಳೆದ ಮೂರು ವರ್ಷಗಳಲ್ಲಿ ಬಂದ ಹಣ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಕ.ರಾ.ರ.ಸಾ. ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ಒಟ್ಟು ಸರಕುಗಳ ವಿವರ ಈ ಕೆಳಗಿನಂತಿದೆ.

ವಿವರ	ಸರಕುಗಳ ಸಂಖ್ಯೆ	ಲಕ್ಷ ರೂ. ಗಳಲ್ಲಿ		
		೧೯೮೭–೮೮	೧೯೮೮–೮೯	೧೯೮೯–೯೦
೧ ಇಂಧನ	೨	೭೪೩೦.೧೫	೭೮೦೦.೧೨	೭೯೨೨.೮೬
೨ ಮೈದುಜಾಲಕ ಎಣ್ಣೆ ಮತ್ತು ಗ್ರೀಸ್	೮	೫೦೨.೬೩	೫೩೪.೮೫	೫೮೧.೦೪
೩ ಟೈರ್, ಟ್ಯೂಬ್ ಮತ್ತು ಫ್ಲಾಪ್‌ಗಳು	೧೪	೨೫೭೭.೭೫	೨೮೬೮.೬೬	೨೭೨೬.೬೦
೪ ಬ್ಯಾಟರಿಗಳು	೨	೧೦೩.೦೭	೧೧೫.೬೮	೧೪೩.೧೮
೫ ಬಿಡಿಬಾಗಗಳು ಮತ್ತು ಜೋಡಣೆಗಳು	೨೦೦೦	೧೧೦೫.೪೧	೧೫೪೯.೨೭	೧೬೪೪.೪೫
೬ ಇತರ ಬಳಕೆ ವಸ್ತುಗಳು	೩೦೦	೧೦೬೪.೨೬	೧೨೯೩.೧೮	೧೨೧೨.೦೦
೭ ಟಿಕೇಟ್ ಲೇಹನ ಸಾಮಗ್ರಿ ಮತ್ತು ಸಮವಸ್ತ್ರಗಳು	೧೭	೧೭೬.೫೫	೪೨೬.೭೦	೨೪೧.೫೮

ಅ) ಕ.ರಾ.ರ.ಸಾ. ಸಂಸ್ಥೆಯು ಸುಮಾರು ೨೫೦೦ ಸರಕುಗಳನ್ನು ಪ್ರತಿ ವರ್ಷ ಖರೀದಿಸಂತ್ತದೆ. ಇವುಗಳನ್ನು ದರಸಂವಿದೆ ಉದ್ದಿಮೆಗಳು, ಮೂಲಕ ಉತ್ಪಾದಕರು, ಸಣ್ಣ ಪ್ರಮಾಣದ ಉದ್ದಿಮೆದಾರರಿಂದ ಪೂರಕ ಉದ್ದಿಮೆಗಳಿಂದ ಖರೀದಿಸುತ್ತೇವೆ.

ಇ) ಎಲ್ಲಾ ಖರೀದಿಯನ್ನು ಆಂಗೀಕರಿಸಿದ ಮೂಲಗಳಿಂದ ಸಮಿತಿಯು ಅನುಮತಿ ನೀಡಿದ ನಂತರವೇ ಖರೀದಿಸಲಾಗುತ್ತದೆ. ಆದರೆ ಕೆಲವೊಂದು ಸಮಯದಲ್ಲಿ ತಕ್ಷಣ ಬೇಕಾಗುವ ಅಗತ್ಯ ಬಿಡಿಭಾಗಗಳನ್ನು ವಿಭಾಗಗಳಿಂದ ಖರೀದಿಸಲಾಗುವುದು. ಈ ಸಂದರ್ಭದಲ್ಲಿಯೂ ಸಹ ಕೇಂದ್ರ ಕಛೇರಿಯಿಂದ ಹೊರಡಿಸಲಾದ ಸೂಚನೆಯನ್ನು ಅನುಸರಿಸಲಾಗುವುದು.

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಟೆಂಡರ್ ಮತ್ತು ಹರಾಜಿನ ಆಧಾರದ ಮೇಲೆ ಬಂದ ಹಣ ಈ ಕೆಳಗಿನಂತಿದೆ.

ವರ್ಷ	ಮೊಬಲಗು (ರೂ.ಗಳಲ್ಲಿ)
೧೯೮೭–೮೮	೩,೭೮,೫೯,೭೪೪–೫೫
೧೯೮೮–೮೯	೪,೨೫,೦೭,೭೨೫–೦೦
೧೯೮೯–೯೦	೫,೦೯,೩೪,೭೨೪–೦೦

ಸರ್ಕಾರಿ ವಸತಿಗೃಹ ಹಂಚಿಕೆ ರದ್ದುಪಡಿಸುವ ಬಗ್ಗೆ

೧೩೮೫. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಹುತೇಕ ರಾಜ್ಯ ಸರ್ಕಾರಿ ನೌಕರರು ಗೃಹ ನಿರ್ಮಾಣ ಮುಂಗಡ ಪಡೆದು ಮನೆಗಳನ್ನು ಬೆಂಗಳೂರಿನ ಹೊರ ಪ್ರದೇಶದಲ್ಲಿ ಕಟ್ಟಿದ್ದರೂ ಸಹ ಸರ್ಕಾರಿ ವಸತಿ ಗೃಹಗಳಲ್ಲಿ (ಜೀವನಭೀಮಾನಗರ ರಾಜಾಜಿ ನಗರ ಮತ್ತು ವಿಲ್ಸನ್ ಗಾರ್ಡನ್) ಮುಂದುವರಿಯುತ್ತಿದ್ದಾರೆ ಎಂಬುದು ನಿಜವೆ;

ಆ) ಸರ್ಕಾರಿ ವಸತಿಗೃಹ ಹಂಚಿಕೆಯಾಗಿರುವ ಕೆಲವೊಂದು ಸರ್ಕಾರಿ ನೌಕರರು ಗೃಹ ನಿರ್ಮಾಣ ಮುಂಗಡವನ್ನು ಪಡೆದು ಮನೆಗಳನ್ನು ಕಟ್ಟಿ ಬೇರೆಯವರಿಗೆ ಹೆಚ್ಚಿನ ಬಾಡಿಗೆಗೆ ಕೊಟ್ಟು ಸರ್ಕಾರಿ ವಸತಿ ಗೃಹಗಳಲ್ಲಿ ಮುಂದುವರಿಯುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದೇ ;